- 2019-2020ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾರಂಭವಾಗಿರುವ ಡಿ.ಪಿ.ಎಸ್.ಇ. ಕೋರ್ಸ್ ನಡೆಸುವ ಸಂಸ್ಥೆಗಳು ಪೂರ್ವ ಪ್ರಾಥಮಿಕ ಶಿಕ್ಷಕರನ್ನು ತರಬೇತಿಗೊಳಿಸುವ ಸಂಸ್ಥೆಗಳಾಗಿರುತ್ತವೆ.
- ಡಿ.ಪಿ.ಎಸ್.ಇ. ಕೋರ್ಸ್ ನಡೆಸುವ ಸಂಸ್ಥೆಯವರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿಯೇ ಬೋಧನಾಭ್ಯಾಸ ಮತ್ತು ನಿಕಟ ಸೇವಾ ಪೂರ್ವ ತರಬೇತಿಗಳಿಗಾಗಿ ಸಂಬಂಧಿಸಿದ ಮಾಧ್ಯಮದ ಅಂಗೀಕೃತ ಪೂರ್ವ ಪ್ರಾಥಮಿಕ ಶಾಲೆಗಳನ್ನು ಬಳಸಿಕೊಳ್ಳುವುದು.
- ಪಠ್ಯಕ್ರಮದಲ್ಲಿ ನಿಗದಿಪಡಿಸಿದ ದಿನಗಳಿಗೆ ವಿದ್ಯಾರ್ಥಿಗಳನ್ನು ಬೋಧನಾಭ್ಯಾಸ ಮತ್ತು ನಿಕಟ ಸೇವಾ ಪೂರ್ವ ತರಬೇತಿಗೆ ನಿಯೋಜಿಸುವುದು. ವಿದ್ಯಾರ್ಥಿಗಳ ಮಾಧ್ಯಮಕ್ಕೆ ಅನುಗುಣವಾಗಿ ವಿವಿಧ ರೀತಿಯ ಪೂರ್ವ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಸದರಿ ಶಾಲಾ ಪಟ್ಟಿಯನ್ನು ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ದೃಢೀಕರಿಸುವುದು. ದೃಢೀಕರಿಸಿದ ಶಾಲಾ ಪಟ್ಟಿಯನ್ನು ಕಡ್ಡಾಯವಾಗಿ ಡಯಟ್ ಪ್ರಾಂಶುಪಾಲರುಗಳು ಪರಿಶೀಲಿಸಬೇಕು.
- ಕಿರು ಪರೀಕ್ಷೆ, ಅಂತಿಮ ಪರೀಕ್ಷೆ, ವಿದ್ಯಾರ್ಥಿಗಳ ಹಾಜರಾತಿ ಇತ್ಯಾದಿಗಳ ಬಗ್ಗೆ ಡಿ.ಪಿ.ಎಸ್.ಇ. ಪಠ್ಯಕ್ರಮ/ಪಠ್ಯವಸ್ತುವಿನಲ್ಲಿ ತಿಳಿಸಿರುವ ಸೂಚನೆಗಳನ್ನು ಅನುಸರಿಸುವುದು.
- ಆಯಾ ಡಯಟ್ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಿಗೆ ಡಯಟ್‌ನ ಹಿರಿಯ ಉಪನ್ಯಾಸಕರು/ಉಪನ್ಯಾಸಕರು ಪ್ರತಿ ಮಾಹೆಯೂ ಭೇಟಿ ನೀಡಿ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ, ಉಪನ್ಯಾಸಕರ ಮಾಹಿತಿ, ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಈ ಕಛೇರಿಗೆ ವರದಿ ಸಲ್ಲಿಸುವುದು.
- ಕಾಲಕಾಲಕ್ಕೆ ಹೊರಡಿಸುವ ಸರ್ಕಾರಿ ಹಾಗೂ ಇಲಾಖೆಯ ಸೂಚನೆಗಳ ಜೊತೆಗೆ ಮೇಲಿನಂತೆ ನೀಡಿರುವ ಸೂಚನೆಗಳನ್ನು ನಿಮ್ಮ ಸಂಸ್ಥೆಗಳಲ್ಲಿ ಪಾಲಿಸುವುದು. ಯಾವುದೇ ನಿಯಮಗಳ ಉಲ್ಲಂಘನೆಗಳಾಗದ ರೀತಿಯಲ್ಲಿ ಸಹಕರಿಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಹಾಗೂ ಶೈಕ್ಷಣಿಕ ವ್ಯವಸ್ಥೆಯನ್ನು ಕಾಪಾಡಲು ಸೂಚಿಸಿದೆ.
- ಡಿ.ಪಿ.ಎಸ್.ಇ ತರಗತಿಗಳ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಅನುಬಂಧ-1 ರಲ್ಲಿ ನೀಡಲಾಗಿರುವ ಶೈಕ್ಷಣಿಕ ವೇಳಾ ಪಟ್ಟಿಯಂತೆ ಆಯಾ ಶೈಕ್ಷಣಿಕ ಸಾಲಿನಲ್ಲೇ ಪೂರ್ಣಗೊಳಿಸಲು ತಪ್ಪದೇ ಕ್ರಮ ವಹಿಸುವುದು.
- ಕೋವಿಡ್ 2019ರ ಹಿನ್ನೆಲೆಯಲ್ಲಿ ಸರ್ಕಾರದಿಂದ/ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಲಾದ ಸುತ್ತೋಲೆ, ಸೂಚನೆಗಳನ್ವಯ online/offline ತರಗತಿಗಳನ್ನು ನಡೆಸುವ ಬಗ್ಗೆ ಕ್ರಮ ವಹಿಸುವುದು.

(ಎಂ.ಆರ್.ಮಾರುತಿ)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು

**ಇವರಿಗೆ:**

ಪ್ರಾಂಶುಪಾಲರುಗಳು, ಡಯಟ್ ಚಿತ್ರದುರ್ಗ ಹಾಗೂ ಕಲಬುರಗಿರವರಿಗೆ ಇವರಿಗೆ ನಿಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಡಿ.ಪಿ.ಎಸ್.ಇ ಕೋರ್ಸ್ ನಡೆಸುವ ಕಾಲೇಜುಗಳಿಗೆ ಸುತ್ತೋಲೆಯನ್ನು ರವಾನಿಸಲು ತಿಳಿಸಿದೆ.

**ಪ್ರತಿಗಳನ್ನು: ವಂದನಾ ಪೂರ್ವಕವಾಗಿ ಹಾಗೂ ಗೌರವಗಳೊಂದಿಗೆ.**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡಗಳು, ಬೆಂಗಳೂರು ಇವರಿಗೆ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ. ರಸ್ತೆ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ಕಛೇರಿ ಪ್ರತಿ.

ಸಿಆರ್6/ಡಿ.ಪಿ.ಎಸ್.ಇ./ಶೈಕ್ಷಣಿಕ ವೇ.ಪ/25/2019-2020 ದಿನಾಂಕ: 05/08/2021

**2021-22ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿ**

**ಶೈಕ್ಷಣಿಕ ವರ್ಷ ದಿನಾಂಕ 06-09-2021 ರಿಂದ**

**ಅನುಬಂಧ-1**

**ಪ್ರಥಮ ಡಿ.ಪಿ.ಎಸ್.ಇ.**

| | | | |
|---|---|---|---|
| ಪ್ರಥಮ ಡಿ.ಪಿ.ಎಸ್.ಇ. ತರಗತಿಗಳ ಪ್ರಾರಂಭ | 06/09/2021 | | |
| ಡಯಟ್‌ಗಳಿಗೆ ಪ್ರಸ್ತಾವನೆ ಕಳುಹಿಸಲು ಕೊನೆಯ ದಿನಾಂಕ | 25/10/2021 | | |
| ಅನುಮೋದನೆ ಮಾಡಲು ಕೊನೆಯ ದಿನಾಂಕ | 27/10/2021 | | |
| ಒಟ್ಟು ಮೊದಲ ಅವಧಿ ಕಾರ್ಯ ದಿನಗಳು | 06/09/2021 ರಿಂದ 23/12/2021 | | 85 |
| ಮಧ್ಯಂತರ ರಜಾ ಅವಧಿ | 24/12/2021 ರಿಂದ 02/01/2022 | 10 | - |
| ಎರಡನೇ ಅವಧಿಯ ಕಾರ್ಯ ದಿನಗಳು | 03/01/2022 ರಿಂದ 20/06/2022 | | 140 |
| ಒಟ್ಟು ಕಾರ್ಯ ದಿನಗಳು | 06/09/2021 ರಿಂದ 20/06/2022 | | 225 |
| ಪರೀಕ್ಷೆ ಪ್ರಾರಂಭ | ಜುಲೈ ಮೊದಲ ವಾರ 2022 | | |
| 2021-22ನೇ ಸಾಲಿನ ವಾರ್ಷಿಕ ರಜೆ | ದಿನಾಂಕ:21/06/2022 ರಿಂದ ಮುಂದಿನ ಶೈಕ್ಷಣಿಕ ಸಾಲಿನ ಪ್ರಾರಂಭದ ದಿನಾಂಕದವರೆಗೆ. | | |

**ದ್ವಿತೀಯ ಡಿ.ಪಿ.ಎಸ್.ಇ.**

| | | | |
|---|---|---|---|
| ದ್ವಿತೀಯ ಡಿ.ಪಿ.ಎಸ್.ಇ. ತರಗತಿಗಳ ಪ್ರಾರಂಭ | 06/09/2021 | | |
| ಮೊದಲ ಅವಧಿ ಕಾರ್ಯ ದಿನಗಳು | 06/09/2021 ರಿಂದ 23/12/2021 | | 85 |
| ಮಧ್ಯಂತರ ರಜಾ ಅವಧಿ | 24/12/2021 ರಿಂದ 02/01/2022 | 10 | - |
| ಎರಡನೇ ಅವಧಿಯ ಕಾರ್ಯ ದಿನಗಳು | 03/01/2022 ರಿಂದ 20/06/2022 | | 140 |
| ಒಟ್ಟು ಕಾರ್ಯ ದಿನಗಳು | 06/09/2021 ರಿಂದ 20/06/2022 | | 225 |
| ಪರೀಕ್ಷೆ ಪ್ರಾರಂಭ | ಜುಲೈ ಮೊದಲ ವಾರ 2022 | | |

(ಎಂ.ಆರ್. ಮಾರುತಿ)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು

ಕರ್ನಾಟಕ Government ಸರ್ಕಾರ of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone : 080 26980100
Fax : 080 26422377

ಶಿತ6/ಡಿ.ಪಿ.ಎಸ್.ಇ./ಶೈಕ್ಷಣಿಕ ವೇ.ಪ/25/2019–2020

ದಿನಾಂಕ: 05/08/2021

## ಸುತ್ತೋಲೆ

ವಿಷಯ: 2021–2022ನೇ ಸಾಲಿಗೆ ಎರಡು ವರ್ಷಗಳ ಶಾಲಾ ಪೂರ್ವ ಶಿಕ್ಷಣದಲ್ಲಿ ಡಿಪ್ಲೊಮಾ (ಡಿ.ಪಿ.ಎಸ್.ಇ.) ಕೋರ್ಸ್‌ನ ಶೈಕ್ಷಣಿಕ ಚಟುವಟಿಕೆಗಳ ಕುರಿತಂತೆ ನಿರ್ದೇಶನಗಳು.

ಉಲ್ಲೇಖ: (1) ಕರ್ನಾಟಕ ಸರ್ಕಾರದ ನಡವಳಿಯ ಆದೇಶ ಸಂಖ್ಯೆ ಇಡಿ 06 ಎಂ.ಪಿ.ಇ 2017, ಬೆಂಗಳೂರು ದಿನಾಂಕ:05–07–2019.

(2) ಈ ಕಛೇರಿ ಸಮ ಪತ್ರ ಸಂಖ್ಯೆ ಶಿತ6 ಸ.ಶಿ.ತ. ಸ. ಶೈಕ್ಷಣಿಕ/ಆಡಳಿತಾತ್ಮಕ ಅ. 06/2019–2020. ಏಕಕಡತ

(3) ಸರ್ಕಾರದ ಪತ್ರ ಸಂಖ್ಯೆ ಇಡಿ 01 ಪಿಟಿಐ 2019 (ಏಕಕಡತ) ದಿನಾಂಕ: 24–09–2019.

=000=

ಉಲ್ಲೇಖ(1)ರ ಸರ್ಕಾರದ ನಡವಳಿ ಆದೇಶದಂತೆ 2019–20ನೇ ಸಾಲಿನಿಂದ ಎರಡು ವರ್ಷಗಳ ಶಾಲಾ ಪೂರ್ವ ಶಿಕ್ಷಣದಲ್ಲಿ ಡಿಪ್ಲೊಮಾ ಕೋರ್ಸ್ (ಡಿ.ಪಿ.ಎಸ್.ಇ.)ಅನ್ನು ಆಂಗ್ಲ ಮಾಧ್ಯಮದಲ್ಲಿ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ಹಾಗೂ ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆ, ದರ್ಗಾರಸ್ತೆ, ಕಲಬುರಗಿ ಈ ಸಂಸ್ಥೆಗಳಲ್ಲಿ ಪ್ರಾರಂಭಿಸಲಾಗಿದೆ.

ಸಂಬಂಧಿತ ಡಯಟ್ ಪ್ರಾಂಶುಪಾಲರುಗಳು ಡಿ.ಪಿ.ಎಸ್.ಇ. ಕೋರ್ಸ್ ಕುರಿತಂತೆ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕ್ರಮಗಳನ್ನು ಕೈಗೊಳ್ಳಲು ಸಕ್ಷಮ ಅಧಿಕಾರ ಹೊಂದಿರುತ್ತಾರೆ.

ಸೂಚನೆಗಳನ್ನು ನೀಡುವ ಪೂರ್ವದಲ್ಲಿ ಇಲಾಖೆಯ ಆಡಳಿತ ವ್ಯವಸ್ಥೆಯನ್ನು ಪರಿಚಯಿಸುವ ದೃಷ್ಟಿಯಿಂದ ಕೆಳಗಿನಂತೆ ಲಘು ವಿವರಗಳನ್ನು ನೀಡಿದೆ.

1. ನಿರ್ದೇಶನಾಲಯ ಎಂದರೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ ಬೆಂಗಳೂರು-560085
2. ಕೇಂದ್ರ ಆಡಳಿತಾತ್ಮಕ ಕಛೇರಿ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಎಂದರೆ ಪ್ರತಿ ಸಂಸ್ಥೆಯಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ವಿದ್ಯಾರ್ಥಿಗಳನ್ನು (Allotment) ಭರ್ತಿ ಮಾಡುವ ಘಟಕ.
3. ಡಯಟ್‌ಗಳು ಎಂದರೆ ರಾಜ್ಯದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು.
4. ಎನ್.ಸಿ.ಟಿ.ಇ ಎಂದರೆ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಮಾನ್ಯತೆಯನ್ನು ನೀಡುವ ರಾಷ್ಟ್ರೀಯ ಪ್ರಾಧಿಕಾರ.

### <u>ಆಡಳಿತಾತ್ಮಕ ಹಾಗೂ ಶೈಕ್ಷಣಿಕ ನಿರ್ದೇಶನಗಳು</u>

- ❖ ಡಿ.ಪಿ.ಎಸ್.ಇ. ಕೋರ್ಸ್ ನಡೆಸುವ ಸಂಸ್ಥೆಗಳು ಎಲ್ಲಾ ಸಂದರ್ಭಗಳಲ್ಲೂ ಸರ್ಕಾರದ ಆದೇಶಗಳು ಮತ್ತು ಇಲಾಖಾ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಎಲ್ಲಾ ರೀತಿಯ ಸ್ಪಷ್ಟೀಕರಣಗಳನ್ನು ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ಪಡೆಯುವುದು. ಸರ್ಕಾರಿ ಆದೇಶಗಳು ಎಂದರೆ ಪ್ರಸ್ತುತ ಜಾರಿಯಲ್ಲಿರುವ ಪ್ರವೇಶ ನಿಯಮ, ಆದೇಶಗಳು ಮತ್ತು ಮೀಸಲಾತಿ ಆದೇಶಗಳು ಆಗಿರುತ್ತವೆ. ಎಲ್ಲಾ ಸಂದರ್ಭಗಳಲ್ಲೂ ಸರ್ಕಾರದ ಆದೇಶಗಳಲ್ಲಿನ ಸೂಚನೆಗಳು ಅಂತಿಮವಾಗಿರುತ್ತದೆ.
- ❖ ಜಿಲ್ಲಾ ಮಟ್ಟದಲ್ಲಿ ಶಿಕ್ಷಕ ತರಬೇತಿ ಸಂಸ್ಥೆಗಳ ಕುರಿತಂತೆ ಎಲ್ಲಾ ರೀತಿಯ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಕ್ರಮಗಳನ್ನು ಡಯಟ್ ಪ್ರಾಂಶುಪಾಲರೇ ಕೈಗೊಳ್ಳತಕ್ಕದ್ದು ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಿದೆ. ನಿಮ್ಮ ಸಂಸ್ಥೆಗಳಲ್ಲಿ ಪ್ರತೀ ಶೈಕ್ಷಣಿಕ ಸಾಲಿನಲ್ಲಿ ದಾಖಲಾತಿಗಳನ್ನು ಮಾಡಿಕೊಳ್ಳುವಾಗ ಮತ್ತು ಇತರೆ ಸಂದರ್ಭಗಳಲ್ಲಿ ಕಡ್ಡಾಯವಾಗಿ ಕೆಳಕಂಡ ಸೂಚನೆಗಳನ್ನು ಪಾಲಿಸುವುದು.